**ಪತ್ರಿಕಾ ಪ್ರಕಟಣೆ**

**ವಿಜಯಪುರ**

**ದಿನಾಂಕ: 11.09.2021.**

**1] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 287/2021 ಕಲಂ: 15(ಎ) ಮತ್ತು 32 [3] ಕೆ.ಇ.ಆ್ಯಕ್ಟ**

ದಿನಾಂಕ: 10.09.2021 ರಂದು 19:15 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಕಾಶೀನಾಥ ಬಾಬು ತರಸೆ ಸಾ॥ ದ್ಯಾಬೇರಿ ತಾ॥ ಜಿ॥ ವಿಜಯಪೂರ ಈತನು ತನ್ನ ಪಾಯಿದೆಗೊಸ್ಕರ ದ್ಯಾಬೇರಿ ಗ್ರಾಮದ ಅಲಿಯಾಬಾದ ರಸ್ತೆಗೆ ಕಾಶಿನಾಥ ಧಾಬಾದ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಸಂಬಂದಿಸಿದ ಇಲಾಖೆಯಿಂದಾ ಅನುಮತಿಯನ್ನು ಪಡೆಯದೇ ಸಾರ್ವಜನಿಕರಿಗೆ ಮದ್ಯ ಸೇವನೆ ಮಾಡಲು ಅನುಮತಿ ನೀಡಿ ಸಿಕ್ಕಿದ್ದು ಇರುತ್ತದೆ. ಜಪ್ತಾದ ಮಾಲು: 1] 180 ಎಲ್‌ದ ಓಟಿ ರಟ್ಟಿನ ಟೆಡ್ರಾ ಪಾಕೇಟಗಳು ಹರಿದು ಖಾಲಿ ಇದ್ದವು –2 ಅವುಗಳ ಅ॥ಕಿ॥ 00–00 2] 2 ಪ್ಲಾಸ್ಟಿಕ ಗ್ಲಾಸಗಳು ಉಪಯೋಗಿಸಿದ್ದು ಅವುಗಳಿಂದ ಸರಾಯಿ ವಾಸನೆ ಇದ್ದದ್ದು ಅ॥ಕಿ॥ 00–00 ಈ ಬಗ್ಗೆ ಜಿ ಎಸ್ ಉಪ್ಪಾರ ಪಿ.ಎಸ್.ಐ ವಿಜಯಪುರ ರೂರಲ್ ಪಿ.ಎಸ್. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 10.09.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ ನಂ: 288/2021 ಕಲಂ: 15(ಎ) ಮತ್ತು 32 [3] ಕೆ.ಇ.ಆ್ಯಕ್ಟ.**

ದಿನಾಂಕ: 10.09.2021 ರಂದು 17.15 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಜಗನ್ನಾಥ ತಾರಾಸಿಂಗ್ ರಾಠೋಡ ಸಾ॥ ಬರಟಗಿ ತಾಂಡಾ ನಂ–1 ಹಾಲಿ ದ್ಯಾಬೇರಿ ಈತನು ತನ್ನ ಡಾಬಾದಲ್ಲಿ ಪಾಯ್ದೇಗೋಸ್ಕರ ಸಂಬಂದಿಸಿದ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯದೇ ಸಾರ್ವಜನಿಕರಿಗೆ ಮದ್ಯ ಸೇವನೆ ಮಾಡಲು ಅನುಮತಿ ನೀಡಿ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಸಾ॥ತ॥ ಎನ್ ಎ ಉಪ್ಪಾರ ಎಎಸ್‌ಐ ರೂರಲ್ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 10.09.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಆಲಮಟ್ಟಿ ಪೊಲೀಸ ಠಾಣೆ ಗುನ್ನೆ ನಂ: 05/2021 ಕಲಂ: 188. 269 ಐಪಿಸಿ**

ದಿನಾಂಕ: 10.09.2021 ರಂದು 22.30 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ಅಮರ ಭೀಮಾಶಂಕರ ಮಡಿವಾಳರ, 2) ರಮೇಶ ಚವ್ಹಾಣ 3) ಪರಶುರಾಮ ಚವ್ಹಾಣ 4) ಬಾಲಾಜಿ ಅರ್ಜುನ ಮಡಿವಾಳರ 5) ಪ್ರವೀಣ ಪರಶುರಾಮ ಮಡಿವಾಳರ 6) ರಾಕೇಶ ಚವ್ಹಾಣ 7) ಸಾಗರ ಬಡಿಗೇರ 8) ಸಂತೋಷ ಬಡಿಗೇರ 9) ಮಂಜು ಕೋಲಕಾರ 10) ಸಂದೀಪ ನರಗುಂದ 11) ರಾಜು ಚಿಮ್ಮಲಗಿ 12) ರಾಘು ನರಗುಂದ ಇವರು ಹಾಗೂ ಇನ್ನು 70–80 ಜನರು ಸಾ॥ ಎಲ್ಲರೂ ಆಲಮಟ್ಟಿ ಆರ್.ಎಸ್ ಇವರು ಮಾನ್ಯ ಕರ್ನಾಟಕ ಸರಕಾರವು ಗಣೇಶ ಚತುರ್ಥಿ ಹಬ್ಬದ ಆಚರಣೆಯ ಸಂದರ್ಭದಲ್ಲಿ ನೋವೆಲ್ ಕೊರೋನಾ ವೈರಸ ಕೋವಿಡ್–19' ಸೋಂಕು ಹರಡುವಿಕೆಯನ್ನು ತಡೆಗಟ್ಟುವ ಸದುದ್ದೇಶದಿಂದ ಮುಂಜಾಗೃತ ಕ್ರಮವನ್ನು ಕೈಗೊಳ್ಳು ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಸದರಿ ಮಾರ್ಗಸೂಚಿಗಳನ್ನು ಗಣೇಶ ಮಂಡಳಿಯವರು ಕಟ್ಟುನಿಟ್ಟಾಗಿ ಅನುಸರಿಸಿ ಗಣೇಶ ಚತುರ್ಥಿ ಹಬ್ಬವನ್ನು ಆಚರಿಸಲು ಆದೇಶ ಮಾಡಿದ್ದು, ಈ ಬಗ್ಗೆ ನಮ್ಮ ಇಲಾಖೆ ವತಿಯಿಂದ ಸಾರ್ವಜನಿಕರಿಗೆ ಹಾಗೂ ಗಣೇಶ ಮಂಡಳಿಯವರಿಗೆ ತಿಳುವಳಿಕೆ ನೀಡಿದ್ದರು ಸಹಿತ, ಆಲಮಟ್ಟಿ ಆರ್.ಎಸ್ ಗ್ರಾಮದ ಶ್ರೀ ಗಜಾನನ ಗ್ರಾಮೀಣ ಅಭಿವೃದ್ಧಿ ಯುವಕ ಮಂಡಳಿಯವರು ತಾವು ಕೂಡಿಸಿದ ಗಣೇಶ ಮೂರ್ತಿಯನ್ನು ವಿಸರ್ಜನೆಮಾಡುವ ಸಲುವಾಗಿ ತಂದ ಟ್ರ್ಯಾಕ್ಟರದಲ್ಲಿ ಟೇಪನ್ನು ಹಚ್ಚಿಸಿ, ಟ್ರ್ಯಾಕ್ಟರ್‌ದಲ್ಲಿ ಡಕ್ ಸೌಂಡಬಾಕ್ಸ್‌ನ್ನು ಜೋರಾಗಿ ಹಚ್ಚಿ, ಟ್ರ್ಯಾಕ್ಟರ್ ಮುಂದೆ ಕೋವಿಡ್–19 ರೋಗ್ ಹರಡುತ್ತದೆ ಅಂತಾ ಗೊತ್ತಿದ್ದರೂ ಸಹಿತ, ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದೆ, ಮಾಸ್ಕನ್ನು ಧರಿಸದೇ, ಒಟ್ಟಿಗೆ ಕೂಡಿಕೊಂಡು ಡ್ಯಾನ್ಸ್‌ಮಾಡಿ ಮಾನ್ಯ ಕರ್ನಾಟಕ ಸರಕಾರದ ಆದೇಶವನ್ನು ಉಲ್ಲಂಘನೆಮಾಡಿದ ಅಪರಾಧ. ಈ ಬಗ್ಗೆ ಶ್ರೀ ಅಪ್ಪಾಸಾಹೇಬ ರಾವುತಪ್ಪ ಘಂಟಿ ಗ್ರಾಮ ಲೆಕ್ಕಾಧಿಕಾರಿಗಳು, ತಹಶೀಲ್ದಾರ ಕಾರ್ಯಾಲಯ ನಿಡಗುಂದಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 10.09.2021 ರಂದು ಆಲಮಟ್ಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.